

# ಶರಣ ಮಾರ್ಗ

ISSN 2455-1546

Vol - 04, issue - 11, May - 2019

ಬಸವಾದಿ ಶರಣರ ಬದುಕು ಹಾಗೂ
ಬೋಧನೆಗೆ ಮೀಸಲಾದ ಮಾಸಿಕ




Scanned with CamScanner

ISSN 2455-1546




# ವಚನಕಾರರ ದೃಷ್ಟಿಯಲ್ಲಿ ಮಾನವ ಸಂಬಂಧಗಳು

– ಡಾ. ಸಿ.ಟಿ.ಜಯಣ್ಣ, ಚಿತ್ರದುರ್ಗ, ಮೊ.9886840737

ಶಿವಶರಣರ ಚಿಂತನೆ ಮನುಷ್ಯಕೇಂದ್ರಿತವಾದುದು. ಮನುಷ್ಯ ಪ್ರಾಣಿವರ್ಗಕ್ಕೆ ಸೇರಿದರೂ ಪ್ರಾಣಿಲೋಕವನ್ನು ಮೀರಿ ಬೆಳೆಯುವ ಅಗತ್ಯವನ್ನು ಶರಣರು ಪ್ರತಿಪಾದಿಸಿದರು. ಮನುಷ್ಯ ಅಲ್ಪಸುಖದಿಂದ ತೃಪ್ತನಾಗದೆ ಚಿರಂತನ ಆನಂದವನ್ನು ಪಡೆಯುವಂತಾಗಬೇಕು; ಬದುಕು ಸಹ್ಯವಾಗಬೇಕೆಂಬ ಆಶಯ ಶರಣರದಾಗಿತ್ತು. ಶರಣರ ವಿಚಾರಧಾರೆ ಸಾರ್ವಕಾಲಿಕವಾಗಿದೆ. ಅಂಧಶ್ರದ್ಧೆಯನ್ನು ಬದಿಗೊತ್ತಿ ವಿಚಾರಪೂರ್ಣವಾದ ಚಿಂತನೆಗಳನ್ನು ಬಿತ್ತಿದ ಅವರು ಜೀವನದ ಹೋರಾಟಕ್ಕೆ ಚಿರಂತನವಾದ ಉತ್ತರವನ್ನು ಕಂಡುಕೊಂಡಿದ್ದಾರೆ. ಮಾನವನ ವ್ಯಕ್ತಿತ್ವದ ಎಲ್ಲ ಶಕ್ತಿಗಳೂ ಸಾರ್ಥಕತೆಯನ್ನು ಪಡೆಯಲು ಬೇಕಾದ ಜೀವನ ರಹಸ್ಯವನ್ನು ಅವರು ತಿಳಿಸಿಕೊಟ್ಟರು. ಜನತೆಯ ಉದ್ಧಾರಕ್ಕೆ ಶರಣರು ವಿಶೇಷ ಆದ್ಯತೆ ನೀಡಿದರು. ಜೀವನದ ಎಲ್ಲ ಮುಖಗಳನ್ನೂ ಪೂರ್ಣದೃಷ್ಟಿಯಿಂದ ಕಾಣಲು ಮನುಷ್ಯ ನಡೆದುಕೊಳ್ಳಬೇಕಾದ ಕ್ರಮವನ್ನು ಅರುಹಿದರು.

ಶರಣರು ಮಾನವ ಸಂಬಂಧಗಳನ್ನು ಒಂದು ಮೌಲ್ಯವನ್ನಾಗಿ ಸ್ವೀಕರಿಸಿದವರು. ವ್ಯಕ್ತಿಯ ಹಾಗೂ ಸಮಾಜದ ಬೆಳವಣಿಗೆಗೆ ಈ ಮಾನವ ಸಂಬಂಧಗಳು ಪೂರಕವಾಗಿರಬೇಕೆಂದು ಅವರು ಒತ್ತಿ ಹೇಳಿದರು. ಸಮಾಜದ ಏಳ್ಗೆಯನ್ನು ಗುರಿಯಾಗಿರಿಸಿಕೊಂಡ ಶರಣರು ಸ್ತ್ರೀಶಕ್ತಿಯ ಮಹತ್ವವನ್ನು ಮನಗಂಡಿದ್ದರು. ಸಮಾಜ ಉದ್ಧಾರವಾಗಬೇಕಾದರೆ ಸ್ತ್ರೀಯ ಪಾತ್ರ ಹಿರಿದಾದುದೆಂದು ಅವರು ಬಲವಾಗಿ ನಂಬಿದ್ದರು. ಸ್ತ್ರೀ ಪುರುಷರಲ್ಲಿ ಸಮಾನತೆಯನ್ನು ಪ್ರತಿಪಾದಿಸಿದರು. ಸ್ತ್ರೀಯನ್ನು ವ್ಯಕ್ತಿಯಾಗಿ ಗುರುತಿಸಿ ಗೌರವಿಸಿದರು. ಶರಣರು ಸಕಲ ಜೀವಾತ್ಮರಿಗೆ ಲೇಸ ಬಯಸಿದರು. ಇವನಾರವ ಇವನಾರವ ಇವನಾರವ ಎಂದು ಬಗೆಯದೆ ಇವ ನಮ್ಮವ ಎಂದು ಸಾರಿ ವಿಶ್ವ ಭ್ರಾತೃತ್ವವನ್ನು ಎತ್ತಿ ಹಿಡಿದರು. ಈ ಬದುಕಿನಲ್ಲಿನ ಬೇಕು-ಬೇಡಗಳನ್ನು ತಿಳಿಹೇಳಿ ಬಾಳ್ವೆಗೆ ಬೆಳಕಾಗುವ ಬಗೆಯನ್ನು ಅರುಹಿದರು. ಸಂಬಂಧ-ಅಸಂಬಂಧಗಳ ಕುರಿತು ತಮ್ಮ ವಚನಗಳಲ್ಲಿ ಅವರು ಸಾಕಷ್ಟು ಜಿಜ್ಞಾಸೆ ನಡೆಸಿದ್ದಾರೆ.

ಮನುಷ್ಯ ಸುತ್ತಲಿನ ಕುಟುಂಬ, ಸಂಸಾರ, ಪರಿಸರ, ಪ್ರಪಂಚ, ಜಗತ್ತಿನೊಂದಿಗೆ ಯಾವ ಬಗೆಯ ಸಂಬಂಧವಿಟ್ಟುಕೊಳ್ಳಬೇಕು, ಹೇಗೆ ಬಾಳಿದರೆ ಚೆನ್ನ ಎಂಬ ಅಂಶವನ್ನು ತಿಳಿಸಿಕೊಟ್ಟಿದ್ದಾರೆ. ಈ ಲೋಕದೊಳಗೆ ಜನಿಸಿ ಬಂದ ಬಳಿಕ ಸ್ತುತಿ ನಿಂದೆಗಳಿಗೆ ವಿಚಲಿತನಾಗದೆ ಸಮಾಧಾನಿಯಾಗಿರಬೇಕು. ಇವನಾರವ ಇವನಾರವ ಎಂದು ಬಗೆಯದೆ ಎಲ್ಲರನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು. ಮನುಷ್ಯರೆಲ್ಲರೂ ಸಮಾನರು. ಸತಿ-ಪತಿ, ಗಂಡು-ಹೆಣ್ಣು, ಮೇಲು-ಕೀಳು ಎಂಬ ಭೇದಭಾವ ಸಲ್ಲದು. ಮನುಷ್ಯನ ಬದುಕು ಪರಿಪೂರ್ಣವಾಗಲು ಸಜ್ಜನರ ಜ್ಞಾನಿಗಳ ಸಂಗ ಮಾಡಬೇಕು. ಯೋಗ್ಯ ಗುರುವಿನ ಮಾರ್ಗದರ್ಶನದಿಂದ ಲಿಂಗ ಜಂಗಮ ದರ್ಶನ ಸಾಧ್ಯ. ಮನುಷ್ಯ ತನ್ನನ್ನು ತಾನು ತಿಳಿಯಲು ಜಗತ್ತನ್ನು ಅರಿತುಕೊಳ್ಳಲು ಸಜ್ಜನ ಸದ್ಭಾವಿಗಳ ಸಂಗ ಅಗತ್ಯವೆಂದು ಶರಣರು


Scanned with CamScanner